# ಭೀಮ ಪತ್ರಿಕೆ

02ನೇ ಸಂಚಿಕೆ-2021

**31 ವರ್ಷಗಳ ಹಿಂದೆ ಭೀಮ ಸಂಘವು ಏಪ್ರಿಲ್ 30 ಅನ್ನು 'ದುಡಿಯುವ ಮಕ್ಕಳ ದಿನ' ಎಂದು ಎತ್ತಿ ಹಿಡಿಯುತ್ತಾ ತನ್ನ ಹುಟ್ಟನ್ನು ಸಾರಿತು. ಇಂದಿಗೂ ಕಾರ್ಮಿಕರ ದಿನಾಚರಣೆಯ ಮುಂಚಿನ ಈ ದಿನವನ್ನು ದುಡಿಯುವ ಮಕ್ಕಳು ತಮ್ಮ ಸಮಸ್ಯೆ ಎತ್ತಲು, ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಮತ್ತು ಆಶಯಗಳನ್ನು ಮುಂದಿಡಲು ಬಳಸುತ್ತಾರೆ.**












THE CONCERNED FOR Working Children
FOUR DECADES IN PARTNERSHIP WITH CHILDREN




**2021ರ ದುಡಿಯುವ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಭೀಮ ಸಂಘವನ್ನು ಒಳಗೊಂಡಂತೆ ನಮ್ಮ ದೇಶದ ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ರಾಜಸ್ಥಾನ, ದೆಹಲಿ, ಗುಜರಾತ್, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿನ ದುಡಿಯುವ ಮಕ್ಕಳ ಸಂಘಟನೆಗಳು ತಮ್ಮ ಒಗ್ಗಟ್ಟಿನ ಧ್ವನಿ ಎತ್ತಿ ಹಕ್ಕೊತ್ತಾಯ ಮಾಡಿದ್ದಾರೆ. ಅವರಿಗೆ ನಿಮ್ಮ ಬೆಂಬಲವಿರಲಿ.**

# ಕೊರೊನಾದಿಂದ ಶಿಕ್ಷಣ/ಶಿಕ್ಷೆನಾ?




ಕೊರೊನಾ ಕಾರಣಕ್ಕೆ ಆರಂಭವಾದ ಲಾಕ್ಡೌನ್‌ನ ಪರಿಣಾಮವು ಈಗಲೂ ಹಲವು ಕ್ಷೇತ್ರದ ಮೇಲೆ ಕರಿಛಾಯೆಯಂತೆ ಮುಸುಕಿದೆ. ಅದರಲ್ಲೂ ಶಿಕ್ಷಣದ ಮೇಲಿನ ಪರಿಣಾಮಗಳು ಮಕ್ಕಳನ್ನು ಗೊಂದಲ ಮತ್ತು ಒತ್ತಡಕ್ಕೆ ತಳ್ಳಿದೆ. ಇಡೀ ಶೈಕ್ಷಣಿಕ ವರ್ಷವನ್ನು ಅನಿಶ್ಚಿತತೆಯಲ್ಲಿಯೇ ಕಳೆದ ಮಕ್ಕಳು ಈಗಲೂ ಅದೇ ಗೊಂದಲದ ಸ್ಥಿತಿಯಲ್ಲಿ ಮುಂದುವರೆಯುತ್ತಿದ್ದಾರೆ. ಅನೇಕ ಮಕ್ಕಳ ಹತ್ತಿರ ಮೊಬೈಲ್ ಇರಲಿಲ್ಲ. ಜೀವನ ನಡೆಸುವುದೇ ಕಷ್ಟವಾದಾಗ ಮೊಬೈಲ್ ಖರೀದಿಸುವುದು ಹೆಚ್ಚಿನ ಹೊರೆಯಾಯಿತು. ನೆಟ್‌ವರ್ಕ್ ಸಮಸ್ಯೆಯೂ ಅಧಿಕವಾಗಿತ್ತು.

ತುಂಬಾ ಮನೆಗಳಲ್ಲಿ ಟಿವಿ ಇರಲಿಲ್ಲ. ಪಾಠಗಳು ಟಿವಿಯಲ್ಲಿ ಪ್ರಸಾರವಾಗುತ್ತಿತ್ತು. ವಿದ್ಯುತ್ ಸಮಸ್ಯೆಯಿಂದ, ಪಾಠಗಳು, ನೋಟ್ಸ್ ಮಾಡಿಕೊಳ್ಳಲು ಸಾಧ್ಯವಾಗದಷ್ಟು ವೇಗವಾಗಿದ್ದರಿಂದ ಮತ್ತು ಗಣಿತದ ಪಾಠಗಳು ಇಂಗ್ಲೀಷಿನಲ್ಲಿ ಪ್ರಸಾರವಾದ್ದರಿಂದ ಟಿವಿಯಲ್ಲಿ ಬಂದ ಪಾಠಗಳು ಮಕ್ಕಳಿಗೆ ಪ್ರಯೋಜನವಾಗಿಲ್ಲ. ಆನ್‌ಲೈನ್ ಕ್ಲಾಸಿನಲ್ಲಿ ಅರ್ಥವಾಗದ್ದನ್ನು ಕೇಳಿ ತಿಳಿದುಕೊಳ್ಳುವ ಅವಕಾಶವೇ ಇರಲಿಲ್ಲ. ಹಾಗಾಗಿ ಪಾಠಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಶಾಲೆ ಶುರುವಾದ ಮೇಲೂ ಮೊಬೈಲ್‌ಗೆ ನೋಟ್ಸ್ ಕಳಿಸುವುದರಿಂದ ಶಾಲೆಯಿಂದ ಬಂದ ಮೇಲೆ ಅದರ ನಕಲು ಮಾಡುವುದೇ ಕೆಲಸವಾಗಿದೆ. ಬರೆಯದೇ ಇದ್ದರೆ, ಶಾಲೆಯಲ್ಲಿ ಎಲ್ಲರೆದುರು ಅವಮಾನ ಮಾಡಿದ ಘಟನೆಗಳಾಗಿವೆ.

ಒಮ್ಮೆಲೆ ಪರೀಕ್ಷೆಗಳನ್ನು ನಡೆಸುತ್ತಿರುವುದು, ಮುಂದಿನ ಅಂತಿಮ ಹಂತದ ಪರೀಕ್ಷೆಗಳಿಗೆ ದಿನಾಂಕ ನಿಗದಿ ಮಾಡುತ್ತಿರುವುದರೊಂದಿಗೆ ಪುನಃ ಶಾಲೆಗಳಿಗೆ ರಜೆ ನೀಡಿರುವುದು ಮಕ್ಕಳನ್ನು ಇನ್ನಷ್ಟು ಒತ್ತಡಕ್ಕೆ ನೂಕುತ್ತಿದೆ. ಎರಡು ಅಥವಾ ಹೆಚ್ಚು ಮಕ್ಕಳಿರುವಲ್ಲಿ ಒಂದೇ ಮೊಬೈಲ್‌ಗೆ ಎಲ್ಲರ ಪಾಠಗಳನ್ನು ಕಳಿಸುತ್ತಿದ್ದು ಎಲ್ಲರೂ ಸೇರಿ ಬರೆಯಲು ಆಗುತ್ತಿಲ್ಲ. ಈಗಿನ ಪರಿಸ್ಥಿತಿಯ ಕುರಿತು ಶಾಲೆಯವರಿಗೂ ಸ್ಪಷ್ಟತೆ ಇಲ್ಲದಿರುವುದು ಕಂಡುಬರುತ್ತಿದೆ.

5ನೇ ತರಗತಿಯ ಒಳಗಿನ ಮಕ್ಕಳಿಗೆ ಶಾಲೆ ಮತ್ತು ಅಂಗನವಾಡಿಗಳು ಆರಂಭವಾಗಿಲ್ಲ. ಶಾಲೆಯಲ್ಲಿ ಬಿಸಿಯೂಟ ಸಿಗುತ್ತಿತ್ತು. ಈಗ ಅದು ಸಿಗುತ್ತಿಲ್ಲ. ಅರ್ಧದಿನದ ಶಾಲೆ ಮುಗಿಸಿ ಮಧ್ಯಾಹ್ನವೇ ಮನೆಗೆ ಹೋಗಬೇಕಾದ್ದರಿಂದ ಊಟವಿಲ್ಲದೇ ಕಷ್ಟಪಟ್ಟು ದೂರ ನಡೆದುಕೊಂಡು ಹೋಗಬೇಕಾಗಿದೆ. ಶಾಲೆಯಲ್ಲಿ ಪ್ರತಿದಿನ ಹಾಲು, ವಿವಿಧ ತರಕಾರಿಗಳಿಂದ ಕೂಡಿದ ಪೌಷ್ಠಿಕಾಂಶಭರಿತ ಬಿಸಿಯೂಟ ಸಿಗುತ್ತಿತ್ತು. ಅಂಗನವಾಡಿಯಲ್ಲಿಯೂ ಕಾಳುಗಳು, ಮೊಟ್ಟೆ ಮುಂತಾದ ಬೆಳವಣಿಗೆಗೆ ಪೂರಕವಾದ ಆಹಾರ ಸಿಗುತ್ತಿತ್ತು. ಇವೆಲ್ಲವೂ ಈಗ ಶಾಲೆಯಲ್ಲಿ ಕೊಡುವ ರೇಶನ್‌ನಿಂದ ಸಿಗುತ್ತಿಲ್ಲ. ಮಧ್ಯಾಹ್ನದ ಬಿಸಿಯೂಟ ಇಲ್ಲದಿರುವುದು ಮಕ್ಕಳು ಶಾಲೆಯಿಂದ ದೂರ ಉಳಿಯಲು ಒಂದು ಕಾರಣವಾಗಿದೆ. ಲಾಕ್ಡೌನ್ ಸಮಯದಲ್ಲಿ ಮಾಡಿದ ಸಾಲ ತೀರಿಸಲು ಶಾಲೆಗೆ ಹೋಗುತ್ತಿದ್ದವರನ್ನು ದುಡಿಮೆಗೆ ನೂಕಿರುವುದು ಮತ್ತು ಸರ್ಕಾರದ ಗೊಂದಲಮಯ ನೀತಿ ಇವೆಲ್ಲವೂ ಶಿಕ್ಷಣದೊಂದಿಗೆ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ತೊಡಕಾಗಿದೆ.


**ಈ ಸಮಸ್ಯೆಗಳ ಪರಿಹಾರದ ಹೊಣೆ ಯಾರದ್ದು?**
**ಇವುಗಳಿಗೆ ಶಿಕ್ಷಣ ಇಲಾಖೆಯ ಜವಾಬ್ದಾರಿ ಮತ್ತು ಪ್ರತಿಕ್ರಿಯೆ ಏನು?**
**ಮಕ್ಕಳ ಆರೋಗ್ಯ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹೊಣೆಗಾರಿಕೆ ಏನು?**
**ಇದರೊಂದಿಗೆ ಶಾಲೆಯಿಂದ ಹೊರಗುಳಿದ ವಿವಿಧ ವಯೋಮಾನದ ಮಕ್ಕಳ ವಿಷಯಕ್ಕೆ ಸ್ಪಂದಿಸುವವರು ಯಾರು?**

THE CONCERNED FOR Working Children
FOUR DECADES IN PARTNERSHIP WITH CHILDREN

# ಸಮುದ್ರದಲ್ಲಿ ಟ್ರಾಫಿಕ್ ಜಾಮ್!!

ಸುಯೆಜ್ ಕಾಲುವೆ ಆಫ್ರಿಕಾ ಖಂಡದ ಈಜಿಪ್ಟ್ ದೇಶದಲ್ಲಿದೆ. 193 ಕಿ.ಮೀ ಉದ್ದದ 24 ಮೀಟರ್ ಆಳ ಮತ್ತು 205 ಮೀಟರ್ ಅಗಲದ ಈ ಕಾಲುವೆ ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರವನ್ನು ಜೋಡಿಸುತ್ತದೆ. ಇದು ಏಷ್ಯಾ ಮತ್ತು ಯುರೋಪ್ ಖಂಡವನ್ನು ಸಂಪರ್ಕಿಸುವ ಅತೀ ಹತ್ತಿರದ ಜಲಮಾರ್ಗವಾಗಿದೆ. ಇದೇ ಮಾರ್ಚ್ 23ರಂದು ‘ಎವರ್‌ಗಿವನ್’ ಎನ್ನುವ ಹಡಗೊಂದು ಈ ಕಾಲುವೆಯಲ್ಲಿ ಸಿಕ್ಕಿಹಾಕಿಕೊಂಡಿತು.

400 ಮೀಟರ್ ಉದ್ದದ, 2,00,000 ಟನ್ ಭಾರದ ಈ ಹಡಗು ಈ ಕಾಲುವೆಯಲ್ಲಿ ಸಾಗುವಾಗ, ಬೀಸಿದ ಭಾರಿ ಮರಳು-ಬಿರುಗಾಳಿಯಿಂದ ಅಡ್ಡ ಸರಿದು ಸಿಕ್ಕಿಹಾಕಿಕೊಂಡಿದ್ದರಿಂದ ಯಾವುದೇ ಹಡಗುಗಳು ಈ ಕಾಲುವೆಯನ್ನು ದಾಟಲು ಸಾಧ್ಯವಾಗಲಿಲ್ಲ. ಇದನ್ನು ಬಿಟ್ಟು ಮತ್ತೊಂದು ದಾರಿಯೆಂದರೆ 8900 ಕಿ.ಮಿ.ಗೂ ಹೆಚ್ಚು ಕ್ರಮಿಸುವುದು. ಅದು ಆಫ್ರಿಕಾ ಖಂಡವನ್ನು ಸುತ್ತಿ ಹೋಗುವುದು. ಅದೇ, ವಾಸ್ಕೋ ಡಿ ಗಾಮಾ ಭಾರತವನ್ನು ತಲುಪಲು ಬಳಸಿದ ಜಲಮಾರ್ಗ. ಹಾಗಾದರೆ ಇದನ್ನು ಬಿಡಿಸುವುದು ಹೇಗೆ?




ಈ ಹಡಗಿನಲ್ಲಿ 25 ಜನ ಭಾರತದ ಕೆಲಸಗಾರರೂ ಇದ್ದರು. ಹಲವಾರು ಇಂಜಿನಿಯರ್ ಹಾಗೂ ಪರಿಣಿತರ ಸತತ 6 ದಿನಗಳ ಪ್ರಯತ್ನ, ಆಲೋಚನೆಯಿಂದ ಮತ್ತು ಭಾರೀ ಗಾತ್ರದ ಅಲೆಗಳ ಸಹಾಯದಿಂದ ಮಾರ್ಚ್ 29ರಂದು ಹಡಗನ್ನು ಬಿಡಿಸಲು ಸಾಧ್ಯವಾಯಿತು. ಇದು ಒಂದು ತರಹ ಸಮುದ್ರದಲ್ಲಿ ಆದ ಟ್ರಾಫಿಕ್ ಜಾಮ್! ಈ ಕಾಲುವೆ ಮೂಲಕ ಪ್ರತಿವರ್ಷ 19,000 ಕ್ಕೂ ಹೆಚ್ಚು ಹಡಗುಗಳು ಸಂಚರಿಸುತ್ತವೆ. ಅಂದರೆ ಪ್ರತಿದಿನ 51 ರಿಂದ 52 ಭಾರೀ ಗಾತ್ರದ ಹಡಗುಗಳು ಹಾದು ಹೋಗುತ್ತದೆ. ಈ 6 ದಿನಗಳ ಅವಧಿಯಲ್ಲಿ ಈಜಿಪ್ಟ್ ದೇಶ ಮಾತ್ರವಲ್ಲದೇ ಜಗತ್ತಿನ ಹಲವಾರು ದೇಶಗಳು ಕೋಟಿಗಟ್ಟಲೆ ಡಾಲರ್ ನಷ್ಟ ಅನುಭವಿಸಬೇಕಾಯಿತು.

# ರಿಗೆ: ಭೀಮ

ಇಂದ,
ನವೀನ್ ಕುಮಾರ್
ಭೀಮ ಸಂಘ, ಹಗರನೂರು.

ಪ್ರೀತಿಯ ಭೀಮ,

ಭೀಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಆಕಾಶ್ ಬರೆದ ಪತ್ರ ಓದಿದ ನಂತರ ನಾನೂ ಒಂದು ಪತ್ರ ಬರೆಯುವ ಎನಿಸಿತು. ಆದರೆ ನನ್ನ ಪತ್ರ ಸಮಸ್ಯೆಯ ಬಗ್ಗೆ ಅಲ್ಲ ನಮ್ಮೂರಿನಲ್ಲಿ ಒಂದು ಸಮಸ್ಯೆಗೆ ಪರಿಹಾರ ಕಂಡುಕೊಂಡ ಬಗ್ಗೆ.

ಪಂಚಾಯಿತಿಯವರೊಂದಿಗೆ, ತಾಲೂಕಿನ ಅಧಿಕಾರಿಗಳೊಂದಿಗೆ ನಮ್ಮ ಸಮಸ್ಯೆಗಳು ಮತ್ತು ಪರಿಹಾರದ ಬಗ್ಗೆ ಚರ್ಚೆ ಮಾಡಲು ಮಾರ್ಚ್ 9 ರಂದು ಹಡಗಲಿಯಲ್ಲಿ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯವರ ಸೌಕರ್ಯಕಾರಿಕೆಯಲ್ಲಿ ತಾಲೂಕು ಮಟ್ಟದ ಜಾರಿ ಪಡೆ ಸಭೆ ನಡೆದಿತ್ತು. ಬೇರೆ ಬೇರೆ ಊರಿನಿಂದ ಭೀಮ ಸಂಘದವರು ಬಂದಿದ್ರು, ನಮ್ಮೂರಿನ ಸಂಘದಿಂದ 4 ಸದಸ್ಯರು ಹೋಗಿದ್ವಿ. ಸುಮಾರು ಊರಿನವರು ಚರಂಡಿ ಸಮಸ್ಯೆ ಎತ್ತಿದ್ರು. ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯವರು ಚರಂಡಿ ಸಮಸ್ಯೆಗೆ ಪರಿಹಾರ ಅಂತ ನಮ್ಮೂರಿನಲ್ಲಿ ಮಾಡಿದ ಬಚ್ಚಲು ಗುಂಡಿಯ ಬಗ್ಗೆ ಹೇಳಿದ್ರು. ಅದರ ಬಗ್ಗೆ ನಾನು ಮತ್ತು ಕಾಳೇಶ್ ಮಾತಾಡಿದ್ವಿ.

ನಮ್ಮೂರಲ್ಲೂ ಮೊದಲು ಪಾತ್ರೆ ತೊಳೆದದ್ದು, ಬಟ್ಟೆ ತೊಳೆದಿದ್ದು, ಸ್ನಾನದ್ದು, ಎಲ್ಲಾ ನೀರು ಚರಂಡಿಗೆ ಬಿಡ್ತಿದ್ರು. ಮನೆ ಮುಂದೆ ಸಣ್ಣ ಚರಂಡಿಯಲ್ಲಿ ಯಾವಾಗ್ಲೂ ಕೊಳಚೆ ನೀರು ಹರಿತಿತ್ತು. ಚಿಕ್ಕ ಮಕ್ಕಳೆಲ್ಲಾ ಅಲ್ಲೇ ಆಟ ಆಡ್ತಿದ್ರು. ಚರಂಡಿ ತುಂಬಿ ಗಬ್ಬು ನಾತ ಹೊಡಿತಿತ್ತು. ಸೊಳ್ಳೆಯಂತೂ ಸಿಕ್ಕಾಪಟ್ಟೆ ಜಾಸ್ತಿಯಾಗಿತ್ತು. ಜನರು ಯಾವಾಗಲೂ ಕಾಯಿಲೆ ಬೀಳ್ತಾ ಇದ್ರು. ಚರಂಡಿ ಸ್ವಚ್ಛ ಮಾಡೋಕೆ ಪಂಚಾಯಿತಿಯವರಿಗೆ ಹೇಳಿದ್ವಿ. ಇದಕ್ಕೆ ಶಾಶ್ವತ ಪರಿಹಾರ ಮಾಡಬೇಕು ಅಂದುಕೊಂಡು ತಾಲೂಕು ಪಂಚಾಯಿತಿ ಇ.ಓ.ರವರ ಆಸಕ್ತಿಯಿಂದ ನಮ್ಮ ಪಂಚಾಯಿತಿಯ ಮುಂದಾಳತ್ವದಲ್ಲಿ ಮನೆ ಮನೆಗೆ ಬಚ್ಚಲುಗುಂಡಿ ಮಾಡಿಸಲು ಮುಂದಾಗಿ, ಪಂಚಾಯಿತಿಯಿಂದಲೇ ಮಾಡಿಸಿಕೊಡುವುದಾಗಿ ಅದರ ಬಗ್ಗೆ ಎಲ್ಲರಿಗೂ ಮಾಹಿತಿ ನೀಡಿ ಬಚ್ಚಲುಗುಂಡಿ ಮಾಡೋಕೆ ಶುರು ಮಾಡಿದ್ರು. ಈಗ ಸಾಮಾನ್ಯ ಎಲ್ಲಾ ಮನೆಯಲ್ಲೂ ಬಚ್ಚಲುಗುಂಡಿ ಇದೆ. ಉದ್ಯೋಗ ಖಾತ್ರಿಯಲ್ಲಿ (ನರೇಗಾ) ಸುಮಾರು 14000 ರೂ. ನಲ್ಲಿ ಮಾಡಿಕೊಟ್ಟಿದ್ದಾರೆ. ಅಪ್ಪ ಅಮ್ಮನಿಗೆ ಸ್ವಲ್ಪದಿನ ಕೆಲಸಾನೂ ಸಿಕ್ತು, ಇಂಗುಗುಂಡಿನೂ ಆಯ್ತು. ಈ ಗುಂಡಿಗೆ ಮುಚ್ಚಳ ಮಾಡಿ, ಅದರ ಮೇಲೆ ನಳ್ಳಿ ಮಾಡಿದ್ದು, ಪಾತ್ರೆ, ಬಟ್ಟೆ ತೊಳೆದ ನೀರೆಲ್ಲಾ ಅದೇ ಗುಂಡಿಗೆ ಹೋಗುವಂತೆ ಮಾಡಲಾಗಿದೆ. ಮನೆ ಮುಂದೆ ಚರಂಡಿ ಸ್ವಚ್ಛ ಆಗಿದೆ. ಮಕ್ಕಳಿಗೆ ಆಡೋಕೆ ಜಾಗ ಆಗಿದೆ. ಸೊಳ್ಳೆನೂ ಕಮ್ಮಿ ಆಗಿದ್ದು, ಕಾಯಿಲೆ ಬೀಳೋದು ತುಂಬಾ ಕಮ್ಮಿ ಆಗಿದೆ. ಎಲ್ಲರೂ ಇದನ್ನು ಮಾಡಿಕೊಂಡ್ರೆ ಚರಂಡಿ ಸಮಸ್ಯೆ ಇರುವುದಿಲ್ಲ. ಚರಂಡಿ ಸ್ವಚ್ಛ ಮಾಡುವ ಪಂಚಾಯಿತಿ ಹಣವನ್ನು ಬೇರೆಯದಕ್ಕೆ ಬಳಸಬಹುದು. ಜಾಗ ಇದ್ರೆ ಬಚ್ಚಲು ಗುಂಡಿಯ ಸುತ್ತ ತರಕಾರಿ ಗಿಡಗಳನ್ನು ಬೆಳೆಸಬಹುದು. ಅದಕ್ಕೂ ಪಂಚಾಯಿತಿಯಿಂದ 2400 ರೂಪಾಯಿ ಸಿಗುತ್ತದೆ. ಇದ್ರ ಬಗ್ಗೆ ಗ್ರಾಮ ಪಂಚಾಯಿತಿಯಲ್ಲಿ ಕೇಳಿದ್ರೆ ಮಾಹಿತಿ ಸಿಗುತ್ತದೆ.

ಭೀಮ: ಆತ್ಮೀಯ ನವೀನ್,

ನಿಮ್ಮ ಪಂಚಾಯತಿಯಲ್ಲಿ ಹಾಗೂ ನಿಮ್ಮ ಸುತ್ತಮುತ್ತ ಬದಲಾವಣೆ ತರಲು ನೀವು, ಮಕ್ಕಳು ಶ್ರಮಿಸುತ್ತಿರುವುದನ್ನು ಕೇಳಿ ತುಂಬಾ ಆನಂದವಾಯಿತು. ನಿಮ್ಮ ಈ ಪ್ರಯತ್ನ ಪ್ರಶಂಸನೀಯ. ಇನ್ನೂ ಹೆಚ್ಚಿನ ಗುಂಪುಗಳು ಹಾಗೂ ಮಕ್ಕಳು ನಿಮ್ಮಿಂದ ಸ್ಫೂರ್ತಿ ಪಡೆಯಲಿ ಹಾಗೂ ತಮ್ಮ ಸುತ್ತಮುತ್ತ ಪ್ರದೇಶವನ್ನು ಉತ್ತಮಗೊಳಿಸಲು ಇದನ್ನು ಉದಾಹರಣೆಯಾಗಿ ಪರಿಗಣಿಸಿ ಅನುಸರಿಸಲಿ.

ನಿಮಗೆ ಏನಾದರೂ ಹೇಳಬೇಕಾದರೆ, ನಿಮಗೆ ಯಾವುದಾದರೂ ಸಮಸ್ಯೆಗಳಿದ್ದರೆ, ಮಾಹಿತಿ ಬೇಕಾದರೆ ನಮಗೆ ತಿಳಿಸಿ.

**8105247409**

40 THE CONCERNED FOR Working Children FOUR DECADES IN PARTNERSHIP